

ಬಳ್ಳಿಯಂತೆ, ಸುರುಳಿಸುರುಳಿಯಾದ ಗುಂಗುರು ಕೂದಲಿನ ಹುಡುಗಿ ದೇವಸ್ಥಾನಕ್ಕೆ ಒಂದು ಸುತ್ತು ಉರುಳು ಹಾಕಿ ಬಂದಾಗೊಮ್ಮೆ ಅವಳನ್ನು ಉದ್ದೇಶಿಸಿ 'ಪುಟ್ಟಿ ಇನ್ನು ಸಾಕು ನಿನ್ನ ಉರುಳುಸೇವೆ. ನಡೆ, ಮನೆಗೆ ಹೋಗುವ. ನಿನ್ನ ಉರುಳು ಸೇವೆಯನ್ನು ನನ್ನಿಂದ ನೋಡಲಾಗುತ್ತಿಲ್ಲ. ಉರುಳು ಸೇವೆ ಮಾಡಿ ನಿನಗೆ ಕಾಯಿಲೆ ಬಂದರೆ ನೋಡಿಕೊಳ್ಳುವವರು ಬೇರೆ ಯಾರಿದ್ದಾರೆ ಮನೆಯಲ್ಲಿ. ನಾನೇ ನೋಡಿಕೊಳ್ಳಬೇಕು' ಎಂದು ಹೇಳುತ್ತಿದ್ದರು, ದೇವಸ್ಥಾನದ ಪ್ರಾಂಗಣದಲ್ಲಿ ಹಾಕಲಾಗಿದ್ದ ಕಲ್ಲುಬೆಂಚಿನ ಮೇಲೆ ಕುಳಿತಿದ್ದ ಯಜಮಾನರು. ಆದರೂ ಆ ಹುಡುಗಿ ಮತ್ತೆ ಮತ್ತೆ ಉರುಳುಸೇವೆ ಮಾಡುತ್ತಲೇ ಇದ್ದಳು. ಕೊನೆಗೊಮ್ಮೆ ನಡೆ ಅಪ್ಪಯ್ಯ, ನನ್ನ ಉರುಳು ಸೇವೆ ಮುಗಿಯಿತು. ಇನ್ನು ಹೊರಡುವ ಮನೆಗೆ ಎಂದು ಹೇಳಿದ್ದು ಎಲ್ಲವೂ ಒಂದು ಕ್ಷಣ ನೆನಪಾಯಿತು.

ಸರಿ ಬಂದೆ, ಇರು ಎಂದು ಹೇಳಿ ನಾವು ಕುಳಿತಿದ್ದಲ್ಲಿಗೆ ಬಂದ ಅವರು 'ನೀವು ಈ ಊರಿನವರಲ್ಲ ಎನ್ನಿಸುತ್ತದೆ. ದೇವರ ದರ್ಶನಕ್ಕೆ ಬಂದಿರಾ? ಯಾವ ಊರು? ನೀವು ಇಲ್ಲಿಗೆಂದೇ ಬಂದವರಾ? ಇನ್ನೂ ಏನನ್ನಾದರೂ ನೋಡಲಿಕ್ಕಿದೆಯಾ? ನೋಡಲಿಕ್ಕಿದ್ದರೆ